ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಶ್ರೀರಂಗಪಟ್ಟಣ

ಸಿ.ಸಿ.351/2016

| | |
|---|---|
| ಸಿ.ಡಬ್ಲ್ಯೂ : | 2 |
| ಪಿ.ಡಬ್ಲ್ಯೂ : | 2 |

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋಪಾಲ್ |
| ತಂದೆ/ ಪತಿಯ ಹೆಸರು | : | ನಿಂಗೇಗೌಡ |
| ವಯಸ್ಸು | : | 48 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಗೆಂಡೆಹೊಸಹಳ್ಳಿ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 30.07.2025**
**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ಸಂಖ್ಯೆ 1, 3 ಮತ್ತು 4 ರವರು ಗೊತ್ತಿರುತ್ತಾರೆ. ಚಾಸಾ.1 ರವರು ನನ್ನ ಹೆಂಡತಿ ಇರುತ್ತಾರೆ.

2015 ನೇ ಇಸವಿಯಲ್ಲಿ ಸುಂದರೇಶ್, ಕೆಂಪಮ್ಮ ಮತ್ತು ಜಯಮ್ಮ ರವರುಗಳು ಗಲ್ಲಿ ಬಿಡದ ಹಾಗೆ ಮನೆಗೆ ಮುಖ್ಯ ಬಾಗಿಲನ್ನು ಪೂರ್ವ ದಿಕ್ಕಿಗೆ ಇಡುತ್ತಿದ್ದರು. ಸುಂದರೇಶ್, ಗುರು, ಚುಂಚೆಗೌಡ ಮತ್ತು ರವಿ ರವರುಗಳು ಗಲ್ಲಿಯನ್ನು ಬಿಡುವ ವಿಚಾರಕ್ಕೆ ನನಗೆ ಗೊದಮೊಟ್ಟೆ ಹಾಗೂ ಇಟ್ಟಿಗೆ ಚೂರಿನಿಂದ ನನ್ನ ದೇಹದ ಬಲಭಾಗಕ್ಕೆ ಹೊಡೆದಿರುತ್ತಾರೆ. ಆಗ ನನ್ನ ಹೆಂಡತಿ ಕೇಳಲು ಬಂದಾಗ ಆರೋಪಿತರು ನನ್ನ ಹೆಂಡತಿಗೆ ಅವ್ಯಾಚ ಶಬ್ದಗಳಿಂದ ಬೈದು ನನ್ನ ಹೆಂಡತಿಯ ಮುಂದಲೆಯನ್ನು ಹಿಡಿದು ಹೊಡೆದಿರುತ್ತಾರೆ ಹಾಗೂ ನನ್ನ ಹೆಂಡತಿಯ ನೈಟಿಯನ್ನು ಹರಿದು ಹಾಕಿರುತ್ತಾರೆ. ನಂತರ ಆರೋಪಿತರು ನಮಗೆ ಜೀವ ಬೆದರಿಕೆ ಸಹಾ ಹಾಕಿರುತ್ತಾರೆ. ಆಗ ನಾನು ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಮುದೆ ಮಾಲು 1 ಮತ್ತು 2 ರಿಂದ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುದ್ದೆ ಮಾಲು 3 ಅನ್ನು ನೋಡಿ ನನ್ನ ಹೆಂಡತಿಯ ನೈಟಿ ಎಂದು ನುಡಿಯುತ್ತಾರೆ.

ಈ ಜಗಳದ ಬಗ್ಗೆ ರಾಜಿ ಪಂಚಾಯಿತಿಯೂ ಸಹಾ ಆಗಿದ್ದು ಆರೋಪಿತರು ರಾಜಿಗೆ ಒಪ್ಪಿರುವುದಿಲ್ಲ. ನಂತರ ಚಾಸಾ.1 ರವರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. ಈ ಘಟನೆ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ನಾನು ಆರೋಪಿತರ ವಿರುದ್ದ ಅಸಲು ದಾವಾ ಸಂಖ್ಯೆ 40/2015 ಎಂದು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ವಜಾ ಆಗಿರುತ್ತದೆ ಎಂದರೆ ಸರಿ. ನಂತರ ನಾನು ಅಸಲು ದಾವಾ ಸಂಖ್ಯೆ 43/2016 ಎಂದು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯೂ ಸಹಾ ವಜಾ ಆಗಿರುತ್ತದೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 43/2016 ರ ವಿರುದ್ದ ನಾನು ಅಪೀಲನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ಕೆಂಪಮ್ಮ ಮತ್ತು ಜಯಮ್ಮರವರುಗಳು ನನ್ನ ವಿರುದ್ದ ಅಸಲು ದಾವಾ ಸಂಖ್ಯೆ 441/2015 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯು ಸಹಾ ಕೆಂಪಮ್ಮ ಮತ್ತು ಜಯಮ್ಮರವರುಗಳ ಪರವಾಗಿ ತೀರ್ಮಾನ ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಈ ದಾವೆಯ ವಿರುದ್ದ ನಾನು ಅಪೀಲನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ಗಲಾಟೆ ಆದಾಗ ಎಷ್ಟು ಜನ ಸ್ಥಳದಲ್ಲಿ ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಮಾರು 10 ರಿಂದ 15 ಜನ ಇದ್ದು ಆರೋಪಿತರು ನಮಗೆ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಇದ್ದ ವ್ಯಕ್ತಿಗಳು ನಿಮ್ಮ ಗ್ರಾಮದವರೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿತರ ಸಂಬಂಧಿಕರು ಎಂದು ನುಡಿಯುತ್ತಾರೆ. ಅವರ ಸಂಬಂಧಿಕರು ಯಾರು ಎಂದು ಹೇಳಲು ಆಗುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಚುಂಚ, ರಾಣಿ, ಬೈರೇಶ್, ಸೋಮೇಶ್, ಸೋಮೇಶ್ ರವರ ಮಗ, ಜಯಮ್ಮರವರ ಮಗಳು ಹಾಗೂ ಕೆಂಪಮ್ಮ ಹಾಗೂ ಜಯಮ್ಮ ರವರ ಅಣ್ಣ ತಮ್ಮಂದಿರುಗಳು ಇದ್ದರು ಎಂದು ನುಡಿಯುತ್ತಾರೆ.

ಜಗಳ ಆಗುವ ಸಂದರ್ಬದಲ್ಲಿ ಆರೋಪಿತರ ಸಂಬಂಧಿಕರನ್ನು ಹೊರತು ಪಡಿಸಿ ಬೇರೆ ಯಾರಾದರೂ ಇದ್ದರೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸ್ವಾಮಿ ಮತ್ತು ಸುರೇಶ್ ರವರುಗಳು ಇದ್ದು ಅವರೇ ಜಗಳವನ್ನು ಬಿಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಕೆ ನೀಡುವ ಸಂದರ್ಬದಲ್ಲಿ ಹೇಳಿರುತ್ತೇನೆ.

ಇಟ್ಟಿಗೆ ಹಾಗೂ ಗೊದಮೊಟ್ಟೆಯಿಂದ ಆರೋಪಿತರು ಹೊಡೆದಾಗ ನಿಮಗೆ ರಕ್ತ ಬಂದಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಬಲ ಭಾಗದ ತಲೆಯಲ್ಲಿ ರಕ್ತ ಬಂದಿರುತ್ತದೆ ಎಂದು ನುಡಿಯುತ್ತಾರೆ. ನೀವು ಧರಿಸಿದ್ದ ಬಟ್ಟೆ ರಕ್ತ ಆಗಿತ್ತೇ ಎನ್ನುವ ಪ್ರಶ್ನೆಗೆ

ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಬಟ್ಟೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ.

ಗಲಾಟೆಯು ಯಾವ ಸಮಯದಿಂದ ಯಾವ ಸಮಯಕ್ಕೆ ನಡೆದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬೆಳಗ್ಗೆ 10.00 ಗಂಟೆಯಿಂದ 12.30 ರವರೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಹೊಡೆದಾಟ ಆದ ನಂತರ ನೀವು ಎಲ್ಲಿಗೆ ಹೋಗಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅರಕೆರೆ ಆಸ್ಪತ್ರೆಗೆ ಹೋಗಿದ್ದು ನಂತರ ಅಲ್ಲಿಂದ ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ಅರಕೆರೆ ಆಸ್ಪತ್ರೆಗೆ ಹೋದಾಗ ಸಮಯ 2.30 ರಿಂದ 3.00 ಗಂಟೆ ಸಮಯ ಆಗಿರಬಹುದು.

ಅರಕೆರೆ ಆಸ್ಪತ್ರೆಯಲ್ಲಿ ನಾನು ಸುಮಾರು 10 ನಿಮಿಷಗಳ ಕಾಲ ಇದ್ದೆನು. ಮಂಡ್ಯ ಆಸ್ಪತ್ರೆಗೆ ಹೋದಾಗ ಸಮಯ ಸಂಜೆ 4.30 ಗಂಟೆ ಆಗಿತ್ತು. ಮಂಡ್ಯ ಆಸ್ಪತ್ರೆಗೆ ಯಾರು ಯಾರು ಹೋಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಹಾಗೂ ಪ್ರಕಾಶ್ ರವರು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿ 4 ದಿವಸಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು 4 ದಿವಸಗಳ ಕಾಲ ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

ನಿಮ್ಮ ಹೇಳಿಕೆಯನ್ನು ಪೊಲೀಸರು ಯಾವಾಗ ಪಡೆದುಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆಸ್ಪತ್ರೆಗೆ ದಾಖಲಾದ ಮೊದಲನೆ ದಿನವೇ ಪೊಲೀಸರು ಆಸ್ಪತ್ರೆಗೆ ಬಂದಿದ್ದು ನಾನು ಅವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನೀವು ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿಯೇ ಹೇಳಿಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಜಿ.ಬಿ.ಆನಂದ್ ರವರು ಸಮಸ್ಯೆಯನ್ನು ಇಲ್ಲಿಯೇ ಬಗೆ ಹರಿಸಿಕೊಳ್ಳೋಣ ಎಂದು ಯಾವಾಗ ಹೇಳಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿ ಇದ್ದಾಗ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ನ್ಯಾಯಾ ಪಂಚಾಯಿತಿ ಆಗಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಜಿ.ಬಿ.ಆನಂದ್ ರವರನ್ನು ಹೊರತುಪಡಿಸಿ ನಿಮ್ಮ ಊರಿನಲ್ಲಿ ಬೇರೆ ಮುಖ್ಯಸ್ಥರು ಯಾರು ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮರಿಗೌಡ, ಸುರೇಶ್ ಹಾಗೂ ಲೊಕೇಶ್ ರವರುಗಳು ಇರುತ್ತಾರೆ ಎಂದು ನುಡಿಯುತ್ತಾರೆ. ರಾಜಿ ಪಂಚಾಯಿತಿಗೆ ಆರೋಪಿತರು ಬರುವಂತೆ ಯಾವಾಗ ಹೇಳಿ ಕಳುಹಿಸಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆಸ್ಪತ್ರೆಯಿಂದ ಬಂದ ಮಾರನೆಯ ದಿವಸ ಹೇಳಿ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಆದರೆ ಆರೋಪಿತರು ರಾಜಿ ಪಂಚಾಯಿತಿಗೆ ಬಂದಿರುವುದಿಲ್ಲ.

ಆಸ್ಪತ್ರೆಯಿಂದ ಬಂದ ನಂತರ ಆರೋಪಿತರಿಗೆ ಬರಲು ಹೇಳಿ ಕಳುಹಿಸಿದ ನಂತರ ನೀವು ದೂರನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಜಗಳ ಆದ 4 ದಿವಸದ ನಂತರ ಚಾಸಾ.1 ರವರು ದೂರನ್ನು ನೀಡಿರುತ್ತಾರೆ.

ಸಾಮಾನ್ಯವಾಗಿ ಗೊದಮೊಟ್ಟೆ ಹಾಗೂ ಇಟ್ಟಿಗೆಗಳು ಊರಿನಲ್ಲಿ ಸಿಗುತ್ತವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿತರು ಮನೆಯನ್ನು ಕಟ್ಟಲು ಅವುಗಳನ್ನು ತೆಗೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಮುದ್ದೆ ಮಾಲುಗಳನ್ನು ಗುರುತಿಸಲು ನೀವೇನಾದರೂ ವಿಶೇಷ ಗುರುತನ್ನು ಮಾಡಿಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಆರೋಪಿತರಿಗೂ ನಿಮಗೂ ಯಾವುದೇ ರೀತಿಯ ಜಗಳ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನೀವೇ ಅವರ ಮೇಲೆ ಜಗಳ ಮಾಡಿದ ಕಾರಣ ನಿಮ್ಮ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಆ ರೀತಿ ಜಗಳ ಆಗಿಲ್ಲ ಎಂದು ನುಡಿಯುತ್ತಾರೆ.

ಸಿವಿಲ್ ದಾವೆ ಇದ್ದ ಕಾರಣ ಅದರಲ್ಲಿ ನನಗೆ ಆರೋಪಿತರ ವಿರುದ್ದ ವೈಷಮ್ಯ ಇದ್ದ ಕಾರಣ ಯಾವುದೇ ಜಗಳ ನಡೆಯದೆ ಇದ್ದರೂ ಸಹಾ ನಾನು ಹಾಗೂ ನನ್ನ ಹೆಂಡತಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿದ್ದು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.